ವಿಜಯವಾಣಿ
ಕನ್ನಡಿಗರ ಧ್ವನಿ

■ ಅಖಿಲ ಭಾರತ ಅಂತರ ವಿವಿ ಈಜು ಚಾಂಪಿಯನ್‌ಷಿಪ್, 2ನೇ ದಿನವೂ ಪೂರ್ವಾ ಶೆಟ್ಟಿಗೆ ಚಿನ್ನ

# ಕೂಟ ದಾಖಲೆಯೊಂದಿಗೆ ಮೀನಾಕ್ಷಿಗೆ ಸ್ವರ್ಣ ಡಬಲ್

**ಬೆಂಗಳೂರು:** ಜೈನ್ ವಿಶ್ವವಿದ್ಯಾಲಯದ ಮೀನಾಕ್ಷಿ ವಿಕೆಆರ್ ಅಖಿಲ ಭಾರತ ಅಂತರ ವಿಶ್ವವಿದ್ಯಾಲಯ ಈಜು ಚಾಂಪಿಯನ್‌ಷಿಪ್ ಮಹಿಳೆಯರ 400ಮೀಟರ್ ಮೆಡ್ಲೆ ವಿಭಾಗದಲ್ಲಿ ಕೂಟ ದಾಖಲೆಯೊಂದಿಗೆ ಸ್ವರ್ಣ ಹಾಗೂ 200ಮೀಟರ್ ಫ್ರೀಸ್ಟೈಲ್‌ನಲ್ಲಿ ಚಿನ್ನ ಗೆದ್ದುಕೊಂಡರು.

ಕನಕಪುರದ ಜೈನ್ ವಿವಿ ಗ್ಲೋಬಲ್ ಕ್ಯಾಂಪಸ್‌ನಲ್ಲಿ ನಡೆಯುತ್ತಿರುವ ಚಾಂಪಿಯನ್‌ಷಿಪ್‌ನ 2ನೇ ದಿನವಾದ ಸೋಮವಾರ ಡಬಲ್ ಸ್ವರ್ಣ ಗೆಲ್ಲುವ ಮೂಲಕ ಮೀನಾಕ್ಷಿ ಎಲ್ಲರ ಕೇಂದ್ರ ಬಿಂದುವಾದರು. 400ಮೀಟರ್ ಮೆಡ್ಲೆನಲ್ಲಿ 5ನಿಮಿಷ 21.13ಸೆಕೆಂಡ್‌ಗಳಲ್ಲಿ ಕ್ರಮಿಸಿ ದಾಖಲೆ ಬರೆದರು. ಈ



ಮೀನಾಕ್ಷಿ

ಮೊದಲು ಬೆಳಗಾವಿ ವಿಟಿಯು ತಂಡದ ಪೂಜಾ ಆಳ್ವಾ (5ನಿ.25.80ಸೆ) ಹೆಸರಿನಲ್ಲಿದ್ದ ದಾಖಲೆಯನ್ನು ಅಳಿಸಿಹಾಕಿದರು. ಇದೇ ವಿಭಾಗದಲ್ಲಿ ಜೈನ್ ವಿವಿ ಪೂರ್ವಾ ಶೆಟ್ಟಿ (5ನಿ.41.35ಸೆ) ಹಾಗೂ ಸಿಎಐನ ಅಂಜನಾ ಮೋಹನ್ (5ನಿ.43.56ಸೆ) ಕ್ರಮವಾಗಿ 2ನೇ ಮತ್ತು 3ನೇ ಸ್ಥಾನ ಪಡೆದುಕೊಂಡರು. 50 ಮೀಟರ್ ಬ್ರೆಸ್ಟ್‌ಸ್ಟ್ರೋಕ್‌ನಲ್ಲಿ ಜೈನ್ ವಿವಿಯ ಪೂರ್ವಾ ಶೆಟ್ಟಿ 36.41 ಸೆಕೆಂಡ್‌ಗಳಲ್ಲಿ ಕ್ರಮಿಸಿ ಚಿನ್ನ ಗೆದ್ದರು.

**2ನೇ ದಿನದ ಫಲಿತಾಂಶ (ಪ್ರಥಮ ಸ್ಥಾನ ಮಾತ್ರ)** ಪುರುಷರು: **50ಮೀಟರ್ ಬ್ರೆಸ್ ಸ್ಟ್ರೋಕ್:** ಜಶನ್‌ದೀಪ್ ಸಿಂಗ್ (ಪಂಜಾಬ್ ವಿವಿ 29.83ಸೆ), **200ಮೀ ಫ್ರೀ ಸ್ಟೈಲ್:** ಅಮಾನ್ ಗಾಯಿ (ಗುರುನಾನಕ್ ವಿವಿ, 2ನಿ.00.61ಸೆ), **400ಮೀ ವೈಯಕ್ತಿಕ ಮೆಡ್ಲೆ:** ಅರವಿಂದ್ ಎಂ (ವಿಟಿಯು, 4ನಿ.45.86ಸೆ). **ಮಹಿಳೆಯರು: 50ಮೀ ಬ್ರೆಸ್ಟ್ ಸ್ಟ್ರೋಕ್:** ಪೂರ್ವಾ ಶೆಟ್ಟಿ (ಜೈನ್ ವಿವಿ, 36.41ಸೆ), **200ಮೀ: ಫ್ರೀಸ್ಟೈಲ್:** ಮೀನಾಕ್ಷಿ ವಿಕೆಆರ್ (ಜೈನ್ ವಿವಿ, 2ನಿ.15.08ಸೆ), **400ಮೀಟರ್ ಮೆಡ್ಲೆ:** ಮೀನಾಕ್ಷಿ ವಿಕೆಆರ್ (ಜೈನ್ ವಿವಿ, 5ನಿ 21.13ಸೆ). **800ಮೀಟರ್ ಫ್ರೀ ಸ್ಟೈಲ್:** ಸ್ನೇಹಾ ಟಿ (ಆರ್‌ಜಿಯುಎಚ್‌ಎಸ್, 9ನಿ.59.00ಸೆ). **ಡೈವಿಂಗ್:** ಪುರುಷರು: ಹೈ ಬೋರ್ಡ್: ಗೌರವ್ ರಘುವಂಶಿ (ಡಿಎವಿವಿ, 239.20), ಮಹಿಳೆಯರು: ಸ್ವಾತಿ ವಿದಾಪ್ (ಎಸ್‌ಒಎಲ್, 147.50).